ರುಚಿಕರವಾದ ಉಪಹಾರ
ಸಿಹಿ-ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ

ವಾರಪತ್ರಿಕೆ

ಸ್ಥಾಪನೆ : 1948
7 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 31 ॥ ಸಂಚಿಕೆ : 30| UDP/1263/2021-23 || RNI.NO.50495/91 ॥ ತಾರೀಕು: 31-08-2021 ॥ ರೂ 5/- ॥ ವಾರ್ಷಿಕ ಚಂದಾ : 350/- ಅಂಚೆಯಲ್ಲಿ : 500/




# ಶಾಂತಿ ನಿಲಯದ "ಶೇಷಗಿರಿರಾವ್"ರ ಸ್ವಾತಂತ್ರ್ಯ ಹೋರಾಟ

ಕುಂದಾಪುರದ ಸ್ವಾತಂತ್ರ್ಯ ಹೋರಾಟಗಾರರಲ್ಲಿ ನೇರಂಬಳ್ಳಿ ಮನೆತನದ ಪಾತ್ರವೂ ಮಹತ್ವದ್ದಾಗಿತ್ತು. ಇವರಲ್ಲಿ ನೇರಂಬಳ್ಳಿ ಶೇಷಗಿರಿ ರಾವ್ ಸಹ ಒಬ್ಬರು. ದೇಶಕ್ಕಾಗಿ 24ರ ಹರೆಯದಲ್ಲೇ ಹೋರಾಟಕ್ಕಿಳಿದವರು. ತನ್ನ ಹಿರಿಯ ಸಹೋದರನ ಪ್ರೋತ್ಸಾಹ ಅವರಿಗೆ ಸ್ಫೂರ್ತಿ ಇಮ್ಮಡಿಗೊಳಿಸಿತ್ತು.

ಮಂಗಳೂರು, ಬೆಳಗಾವಿ, ಕಣ್ಣಾನೂರು ಜೈಲುಗಳಲ್ಲಿ, ಜಮಾಖಾನೆ ನೇಯುವುದು, ತೋಳೆಯುವುದು, ತೆಂಗಿನಕಾಯಿ ಸಿಪ್ಪೆ ತೆಗೆಯುವುದು, ಮುಂತಾದ ಕೆಲಸ ಮಾಡಬೇಕಾಗಿ ಬಂದರೂ ದೇಶದ ಸ್ವಾತಂತ್ರ್ಯಕ್ಕಾಗಿ ಸೇವೆ ಮಾಡುತ್ತಿದ್ದೇನೆ ಎಂಬ ಹೆಮ್ಮೆಯಿಂದಲೇ ಇವರು ಜೈಲಲ್ಲಿ ಆತ್ಮವಿಶ್ವಾಸದಿಂದ ಇದ್ದರು.

ತನ್ನನ್ನು ಹುರಿದುಂಬಿಸಿದ ಹಲ್ಸನಾಡು ಸೂರಪ್ಪಯ್ಯ , ಕೋಣಿ ಅಣ್ಣಪ್ಪ ಕಾರಂತ, ಹಾಲಾಡಿ ಶೀನಪ್ಪ ಶೆಟ್ಟರ ತ್ಯಾಗ ಮನಸ್ಸಲ್ಲಿಟ್ಟುಕೊಂಡು ವೆಂಕಟೇಶ ಕಾಮತ್ ಹಾಗೂ ಜಗನ್ನಾಥ್ ಜೋಷಿ ಯವರೊಂದಿಗೆ ಇವರು ಧೈರ್ಯದಿಂದಲೇ ಜೈಲು ಶಿಕ್ಷೆ ಅನುಭವಿಸಿದ್ದರು.

"ಡೆಲ್ಲಿ ಚಲೊ" ಚಳುವಳಿಯಲ್ಲಿ

**ಸ್ವಾತಂತ್ರ್ಯದ ಅಮೃತ ಮಹೋತ್ಸವ**

ಭಾಗವಹಿಸಿದಾಗ 1941ರಲ್ಲಿ ಮಾಸ್ತಿಕಟ್ಟೆಯಲ್ಲಿ ಇವರನ್ನು ಬ್ರಿಟಿಷರು ಬಂಧಿಸಿದ್ದರು. ಜೈಲಿನಿಂದ ಬಿಡುಗಡೆಯಾದ ಮೇಲೆಯೂ ಇವರ ಹೋರಾಟ ನಿಲ್ಲಲಿಲ್ಲ. ಗಾಂಧೀಜಿ ಯವರ ಅಹಿಂಸಾ ಚಳವಳಿ ಇವರೂ ಅನುಸರಿಸಿದರು. ವಿನೋಬಾ ಭಾವೆಯವರ ಸರಳ ಜೀವನ ತತ್ವದಿಂದ ಆಕರ್ಷಣೆ ಗೊಂಡವರು.

ಚಿಕ್ಕವನಿದ್ದಾಗ ಕುಂದಾಪುರಕ್ಕೆ ಗಾಂಧೀಜಿ ಬಂದಾಗ ಅವರನ್ನು ನೋಡಿ ಅವರ ಚಿನ್ನು ಮುಟ್ಟುವ ಅವಕಾಶ ಸಿಕ್ಕಿತು ಎಂದು ಸಂತೋಷದಿಂದ ಹೇಳಿಕೊಳ್ಳು ತ್ತಿದ್ದವರು ನೇರಂಬಳ್ಳಿ ಶೇಷಗಿರಿರಾಯರು.

ಸ್ವಾತಂತ್ರ್ಯದ ನಂತರ ಉದ್ಯೋಗಕ್ಕಾಗಿ ಮುಂಬೈಗೆ ತೆರಳಿ ಅಲ್ಲಿಯೂ ಕಾರ್ಮಿಕರ ಹಿತಾಸಕ್ತಿಗಾಗಿ ಹೋರಾಟ ನಡೆಸಿದವರು.

ಯುವಕನಾಗಿದ್ದಾಗಲೇ ಬ್ರಿಟಿಷರ ವಿರುದ್ಧ ಕ್ರಾಂತಿಕಾರಿ ಮನೋಭಾವ ಬೆಳೆಸಿಕೊಂಡ ಇವರು ದ.ಕ. ಜಿಲ್ಲಾ



**ನೇರಂಬಳ್ಳಿ ಪುತ್ರ :**

ಶ್ರೀ ಸುಬ್ಬಣ್ಣಯ್ಯ ಹಾಗೂ ಶ್ರೀಮತಿ ತುಂಗಮ್ಮ ದಂಪತಿಯ ಪುತ್ರನಾಗಿ 1917ರಲ್ಲಿ ಜನಿಸಿದ ಶೇಷಗಿರಿ ಅವರದ್ದು ಅಜಾನುಬಾಹು ವ್ಯಕ್ತಿತ್ವ, ಕಂಚಿನ ಕಂಠದ ವಾಕ್ಪಟುತ್ವ, ಖಾದಿ ಬಟ್ಟೆ ಧರಿಸಿ ಜನರೊಂದಿಗೆ ಬೆರೆಯುವ ಗುಣ, ಹಸನ್ಮುಖ ದೊಂದಿಗೆ ಜನರ ಯೋಗಕ್ಷೇಮ ವಿಚಾರಿಸುವ ಮಾನವೀಯತೆ.

ಕಾಂಗ್ರೆಸ್, ಕಮಿಟಿಯ ಜಂಟಿ ಕಾರ್ಯದರ್ಶಿಯಾಗಿದ್ದರು. "ಭಾರತ ಬಿಟ್ಟು ತೊಲಗಿರಿ" ಚಳುವಳಿಯಲ್ಲಿ ಯುವಕರು ಭಾಗವಹಿಸುವಂತೆ ಹುರಿದುಂಬಿಸಿದವರು.

ಮುಂಬೈಯಿಂದ 1977ರಲ್ಲಿ ಊರಿಗೆ ಮರಳಿದ ನಂತರ ತಮ್ಮ ಕುಂದೇಶ್ವರ ದೇವಸ್ಥಾನದ ಬಳಿಯಿರುವ"ಶಾಂತಿ ನಿಲಯ"ದಲ್ಲಿದ್ದು ವಿದ್ಯಾರ್ಥಿಗಳಿಗೆ, ಯುವಕರಿಗೆ ಪ್ರೇರಣೆ ನೀಡುವ ಸೇವೆ ಮುಂದುವರೆಸಿದವರು.

ನೇರಂಬಳ್ಳಿ ಶೇಷಗಿರಿರಾಯರ ನಾಲ್ವರು ಮಕ್ಕಳಲ್ಲಿ ನೇರಂಬಳ್ಳಿ ಸುಬ್ಬರಾವ್ ಜಿಲ್ಲಾ ನ್ಯಾಯಾಧೀಶರಾದರು. ಮಂಜುನಾಥರಾವ್ ಮುಂಬಯಿ ಮಹಾನಗರ ಪಾಲಿಕೆಯಲ್ಲಿ ಪ್ರಮುಖ ಅಭಿಯಂತರಾದರು. ಶ್ರೀಯುತ ಸುಬ್ಬರಾಯರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಮಂಜುನಾಥರಾವ್ ಕುಂದಾಪುರದಲ್ಲಿ ನೆಲೆಸಿ ಧಾರ್ಮಿಕ ಸೇವಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದಾರೆ.

ಪುತ್ರಿಯರಾದ ಕೆನರಾ ಬ್ಯಾಂಕಿನ ನಿವೃತ್ತ ಅಧಿಕಾರಿ ಶ್ರೀಮತಿ ನಳಿನಿ ಪಿ.ಎನ್., ಹಾಗೂ ಶ್ರೀಮತಿ ಶಾಲಿನಿರಾವ್ ಬೆಂಗಳೂರಲ್ಲಿ ನೆಲೆಸಿದ್ದಾರೆ.

ಸ್ವಾತಂತ್ರ್ಯ ಹೋರಾಟಗಾರರೆಂದು

**ಜೈಲಿಗೆ ಹೋದುದಕ್ಕೆ ಕೆಲಸದಿಂದ ವಜಾ**

ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ನೇರಂಬಳ್ಳಿ ಶೇಷಗಿರಿ ರಾವ್ ಉದ್ಯೋಗ ಕ್ಕಾಗಿ ಮುಂಬಯಿಗೆ ತೆರಳಿದ್ದರು. ಟೆಕ್ಸ್‌ಟೈಲ್ ಡಿಪಾರ್ಟ್‌ಮೆಂಟ್ ಒಂದರಲ್ಲಿ ಕೆಲಸವೂ ದೊರಕಿತು. ಆದರೆ ಇವರು ಜೈಲಿಗೆ ಹೋದವರು, ಕಾಂಗ್ರೆಸ್‌ಗೆ ಕೆಲಸ ಮಾಡಿದವರು ಎಂಬ ಕಾರಣಕ್ಕಾಗಿ ಅವರನ್ನು ಕೆಲಸದಿಂದಲೇ ವಜಾ ಮಾಡಲಾಗಿತ್ತು. ನಂತರ ಖಾಸಗಿ ಕಂಪೆನಿಯೊಂದು ಇವರಿಗೆ ಕೆಲಸ ನೀಡಿತು.

ಸರಕಾರ ಇವರನ್ನು ಗೌರವಿಸಿ ಮಾಸಿಕ ಗೌರವಧನವನ್ನೂ ಮಂಜೂರು ಮಾಡಿತ್ತು. ದೇಶಕ್ಕಾಗಿ ಹೋರಾಡಿದ ಕಾರಣಕ್ಕಾಗಿ ಹತ್ತು ಹಲವು ಸೌಲಭ್ಯ ಪಡೆಯಲು ಹಾತೊರೆದವರಲ್ಲ. ಆದರೆ ತನ್ನ ಅನುಭವವನ್ನು ಇತರರೊಂದಿಗೆ ಹಂಚಿಕೊಂಡು ಸಂತೋಷ ಪಡುವರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಇವರನ್ನು ಸ್ಮರಿಸುವುದು ನಮ್ಮ ಕರ್ತವ್ಯವಾಗಿದೆ.

# ಸಮಾಜ ಅಭಿವೃದ್ಧಿಯ ಚಿಂತಕಿ ಶ್ರೀಮತಿ ಡೊರೊತಿ ತೋಳಾರ್

ಪ್ರಸಿದ್ಧ ಕೈಗಾರಿಕೋದ್ಯಮಿ ದಿವಂಗತ ಎಸ್.ಪ್ರಭಾಕರ ತೋಳಾರ್ ಅವರ ಧರ್ಮಪತ್ನಿ, ಕುಂದಾಪುರ ಮಹಿಳಾ ಸಮಾಜದ ಸ್ಥಾಪಕರು, ಪ್ರಕೃತಿ ಪ್ರಿಯರು , ಸಮಾಜ ಅಭಿವೃದ್ಧಿಯ ಚಿಂತಕರೂ ಆಗಿದ್ದ ಶ್ರೀಮತಿ ಡೊರೊತಿ ತೋಳಾರ್ (92) ಆಗಸ್ಟ್ 25 ರಂದು ನಿಧನರಾದರು.

ಶಿಸ್ತು, ಸ್ವಚ್ಚತೆ, ಕರ್ತವ್ಯ ನಿಷ್ಠೆ ಬಗ್ಗೆ ಕಾಳಜಿ ಹೊಂದಿದ್ದ ಇವರು ತಮ್ಮ ಕುಟುಂಬದ ಕೈಗಾರಿಕೋದ್ಯಮ , ಹೋಟೇಲ್ ಉದ್ಯಮ ಪ್ರಗತಿಯಲ್ಲೂ ಬೆಂಬಲಿಗರಾಗಿದ್ದವರು. ಕುಂದಾಪುರದ ಪ್ರತಿಷ್ಠೆಯ ಹೋಟೆಲ್ ಎನಿಸಿಕೊಂಡ "ಹೋಟೆಲ್ ಶರೋನ್" ಸ್ಥಾಪನೆಯಾ ದಂದಿನಿಂದ ಹೋಟೆಲ್‌ನ ಸ್ವಚ್ಚತೆ ಹಾಗೂ ಹೊರಾಂಗಣದ ಗಾರ್ಡನಿಂಗ್ ಬಗ್ಗೆ ಬಹಳ ಮುತುವರ್ಜಿ ತೋರಿದವರು.

ಧಾರ್ಮಿಕ, ಶೈಕ್ಷಣಿಕ ಚಟುವಟಿಕೆಗಳು ಹಾಗೂ ಸಮಾಜ ಸೇವಾ ಕಾರ್ಯಗಳಿಗೆ ಒಂದೇ ರೀತಿಯಲ್ಲಿ ಆದ್ಯತೆ ನೀಡುತ್ತಿದ್ದ ಇವರು ಅಗತ್ಯವುಳ್ಳವರಿಗೆ ನೆರವು ನೀಡುವಲ್ಲಿ ಉತ್ಸಾಹ ತೋರಿಸುತ್ತಿದ್ದರು.



ಸಮಾನ ಮನಸ್ಕ ಮಹಿಳೆಯರೊಂದಿಗೆ "ಮಹಿಳಾ ಸಮಾಜ" ಕುಂದಾಪುರ ಸ್ಥಾಪಿಸಿದ್ದರು. ಕುಂದಾಪುರದಲ್ಲಿ ಪ್ರಥಮ ನರ್ಸರಿ ಸ್ಕೂಲ್ ಸ್ಥಾಪಿಸುವಲ್ಲಿ ಮಹಿಳಾ ಸಮಾಜದ ಪಾತ್ರ ಮುಖ್ಯವಾಗಿತ್ತು.

ಭಾರತ ಚೀನಾ ಯುದ್ಧ ನಡೆಯುತ್ತಿದ್ದಾಗ ದೇಶದ ಯುದ್ಧನಿಧಿಗಾಗಿ ಮಹಿಳಾ ಸಮಾಜದ ವತಿಯಿಂದ ಚಿನ್ನ ಸಂಗ್ರಹಿಸಿ ನೀಡಲಾಗಿತ್ತು.

ಪರಿಸರ ಪ್ರಿಯರಾದ ಡೊರೊತಿ ತೋಳಾರ್ ಅವರು ಕುಂದಾಪುರ ಪರಿಸರದಲ್ಲಿ ಗಿಡಗಳನ್ನು ನೆಟ್ಟು ಬೆಳೆಸುವಲ್ಲಿ ಅಭಿಯಾನ ನಡೆಸಿದವರು. ಉದ್ಯಾನವನದ ಬಗ್ಗೆ ಇವರಿಗೆ ಅಪಾರ ಕಾಳಜಿ. ವೈವಿಧ್ಯಮಯ ವರ್ಗದ ಸಸ್ಯಗಳನ್ನು ನೆಟ್ಟು ಬೆಳೆಸುತ್ತಿದ್ದರು. ಈ ಸಸ್ಯಗಳ ಅಧ್ಯಯನಕ್ಕಾಗಿ ಭಂಡಾರ್‌ಕಾರ್ಸ್ ಕಾಲೇಜಿನ ಸಸ್ಯ ಶಾಸ್ತ್ರದ ವಿದ್ಯಾರ್ಥಿಗಳು ಬರುತ್ತಿದ್ದರು. ಜನರೊಂದಿಗೆ ಬೆರೆಯಲು ಇಷ್ಟಪಡುತ್ತಿದ್ದ ಡೊರೊತಿ ತೋಳಾರ್ ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ನಡೆಸುವಲ್ಲಿ, ಅದನ್ನು ಅನುಷ್ಠಾನಗೊಳಿಸುವಲ್ಲಿ ಚಿಂತನೆ ನಡೆಸುತ್ತಿದ್ದ ಬಹುಮುಖ ವ್ಯಕ್ತಿತ್ವದ ಸಾಧಕರು.

ಕುಟುಂಬಕ್ಕೆ ಮಾರ್ಗದರ್ಶಕರಾಗಿದ್ದ ಇವರು ಪತಿ ಪ್ರಭಾಕರ ತೋಳಾರ್ ಅವರಂತೆ ಸೌಮ್ಯ ಸ್ವಭಾವದ ವಿನಮ್ರತೆಯ ಗುಣವುಳ್ಳ ಗೌರವಾನ್ವಿತ ಮಹಿಳೆ.

ಇವರು ಮಾಧುರಿ ದೇವದರ್, ಶೋಭಾ ಸೋನ್ಸ್, ಪ್ರಶಾಂತ್ ತೋಳಾರ್ , ರಾಜೇಂದ್ರ ತೋಳಾರ್ ಸಹಿತ ಇಬ್ಬರು ಪುತ್ರಿಯರು , ಇಬ್ಬರು ಪುತ್ರರನ್ನು ಅಗಲಿದ್ದಾರೆ. ಎಂಟುಮಂದಿ ಮೊಮ್ಮಕ್ಕಳು, 14 ಮಂದಿ ಮರಿಮಕ್ಕಳಿಗೆ ಅಜ್ಜಿಯ ಪ್ರೀತಿ ಸ್ಮರಣೀಯವಾಗಿದೆ.

# ಹಬ್ಬದ ಆಚರಣೆಯಲ್ಲೂ ಸ್ವಯಂ ನಿಯಂತ್ರಣ ಬಹಳ ಮುಖ್ಯ

## ಸಚಿವ ಸುನೀಲ್ ಕುಮಾರ್



ಹಟ್ಟಿಯಂಗಡಿ ಶ್ರೀ ಸಿದ್ದಿವಿನಾಯಕ ದೇವಸ್ಥಾನದಲ್ಲಿ ಸಚಿವ ಸುನೀಲ್ ಕುಮಾರ್

"ಸರಕಾರದ ಪ್ರಥಮ ಆದ್ಯತೆ ಜನರ ಆರೋಗ್ಯ , ಧಾರ್ಮಿಕ ಆಚರಣೆಯೂ ನಡೆಯಬೇಕು. ಆದರೆ ಜನರು ಸ್ವಯಂ ನಿಯಂತ್ರಣ ಇಟ್ಟುಕೊಳ್ಳಬೇಕು. ಕೇಂದ್ರ ಸರಕಾರದ ಕಾರ್ಯಸೂಚಿಯಂತೆ ರಾಜ್ಯ ಸರಕಾರ ಸುತ್ತೋಲೆ ಹೊರಡಿಸುತ್ತದೆ. ಆ ಕಟ್ಟುಪಾಡುಗಳನ್ನು ಅನುಸರಿಸಿ ಧಾರ್ಮಿಕ ಆಚರಣೆ ಮಾಡೋಣ. ಆದರೆ ಸಂಭ್ರಮದ ಆಚರಣೆ ಮುಂದೆ ಮಾಡೋಣ" ಎಂದು ಕರ್ನಾಟಕದ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವ ಸುನೀಲ್ ಕುಮಾರ್ ಹೇಳಿದರು.

ಕೊಲ್ಲೂರು ಹಾಗೂ ಹಟ್ಟಿಯಂಗಡಿ ಕ್ಷೇತ್ರಗಳಿಗೆ ಭೇಟಿ ನೀಡಿದ ಅವರು, ನಾನು ಸಚಿವನಾಗಿ ಕೆಲವು ದಿನಗಳಷ್ಟೇ , ಆಗಿದ್ದು ನನ್ನ ಇಲಾಖೆಯಲ್ಲಿ ಹೊಸತನ ತರಲು ಪ್ರಯತ್ನಿಸಲಿದ್ದೇನೆ. ಎಲ್ಲಾ ಅಕಾಡೆಮಿಗಳಲ್ಲೂ ಹೊಸತನ ತರುವ ಯೋಚನೆ ಇದೆ ಎಂದೂ ಹೇಳಿದರು.

ಸೆಪ್ಟೆಂಬರ್ 1 ರಿಂದ 9ರಿಂದ 12ನೇ ತರಗತಿಯವರೆಗೆ ಶಾಲಾ ಕಾಲೇಜು ಆರಂಭಿ ಸಲು ಜಿಲ್ಲಾ ಆಡಳಿತ ನಿರ್ಧರಿಸಿದ್ದು ಕಾಲೇಜಿನ ಆಡಳಿತ ಮಂಡಳಿ ಹಾಗೂ ಶಿಕ್ಷಕರು ಕೋವಿಡ್ ನಿಯಮ ಪಾಲಿಸಿಕೊಂಡು ವಿದ್ಯಾರ್ಥಿಗಳ ಜವಾಬ್ದಾರಿ ವಹಿಸಿಕೊಳ್ಳಬೇಕು ಎಂದು ಉಡುಪಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.